Request to move condolence motion on the Demise of the Pope

ಶ್ರೀ ಎಚ್. ಗಂಗಾಧರನ್.—ಮಾನ್ಯ ಅಧ್ಯಕ್ಷರೆ. ಮಾನ್ಯ ಸಭಾನಾಯಕರನ್ನು ಹಾಗೂ ಮಾನ್ಯ ವಿರೋದ ಪಕ್ಷದ ನಾಯಕರನ್ನು ತಮ್ಮ ಮೂಲಕ ಪ್ರಾರ್ಥಿಸಿಕೊಳ್ಳುವುದೇನೆಂದರೆ, ಜಗತ್ತಿನ ೭೦ ಕೋಟಿ ಜನಾಂಗದ ಧರ್ಮಗುರುಗಳಾಗಿದ್ದವರು, ಕರ್ನಾಟಕದ ೬ ಲಕ್ಷ ಜನಾಂಗದ ಧರ್ಮಗುರುಗಳಾಗಿದ್ದ ಪೋಪ್ ಅವರು ನಿಧನರಾದ ಬಗ್ಗೆ ಈ ಸಭೆ ಶ್ರದ್ಧಾಂಜಲಿಯನ್ನು ಅರ್ಪಿಸಲಿಕ್ಕೆ ಸಭಾಧ್ಯಕ್ಷರು ಸಮಯಾವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು. ಈಗ Papers to be laid on the Table ಮತ್ತು ಕಾಲ್ ಅಟೆನ್‌ಷನ್ ಇದೆ ಅದು ಆದ ಮೇಲೆ ತಾವು ಈ ವಿಷಯ ಹೇಳಿ.

PAPERS LAID ON THE TABLE

SRI G. RAME GOWDA(Minister for Food and Forest).—I lay on the Table :

Report of Investigation regarding the accident to the Departmental Elephants in the course of shooting of a film in Nagarhole Wild Life Sanctuary in pursuance of an assurance.

SECRETARY.—I lay on the Table :

First List of Unstarred questions and answers.

MR. SPEAKER.—The paper are laid

Villages in Sedam Taluk without Primary Schools

2. SRI SHERKHAN(Sedam).— Will the Minister for Education; be pleased to state:—

(a) the names of villages in Sedam Taluk of Gulbarga District where there are no primary schools ;

(b) the names of schools where untrained teachers to teach in the Telugu medium have been posted as permanent or on deputation basis ;

(c) the number of Telugu Primary School in Sedam Taluka without teachers with lesser number of teachers when compared to the strength of the students;

(d) the total number of trained and untrained Telugu Teachers in Sedam Taluk ;

(e) the number of Telugu, Urdu and Kannada Teachers recuited this year and posted to Sedam Taluk ;

(f) their number according to the medium of instruction *i.e.*, Telugu, Urdu and Kannada ;

(g) the number of Primary schools in Sedam Taluk (Telgu medium) that have been demanding additional hands since last five years?

SRI B. SUBBAYYA SHETTY (Minister for Education).—

(*a*)—

(1) Injahalli
(2) Hallammanahalli
(3) Gazalpur
(4) Mailwar
(5) Bhimsagar

(*b*) Nil

(*c*) Nil

(*d*) Nil

(*e*) Nil

(*f*) Dose not arise

(*g*) Nil

ತುಮಕೂರು ಜಿಲ್ಲೆಯ ಕುಣಿಗಲ್ ತಾಲ್ಲೂಕು. ಅಮೃತೂರಿನಿಂದ ಮಂಡ್ಯಕ್ಕೆ ಹೋಗುವ ರಸ್ತೆಯನ್ನು ಅಭಿವೃದ್ಧಿಪಡಿಸುವುದು

೧೧. ಶ್ರೀ ಡಿ. ಟಿ. ಮಾಯಣ್ಣ (ಹುಲಿಯೂರುದುರ್ಗ)—ನಿ ಲೋಕೋಪಯೋಗಿ ಮಂತ್ರಿಗಳು ಈ ವಿಷಯವನ್ನು ದಯೆಯಿಟ್ಟು ತಿಳಿಸುವರೆ.—

(ಅ) ತುಮಕೂರು ಜಿಲ್ಲೆಯ ಕುಣಿಗಲ್ ತಾಲ್ಲೂಕು, ಅಮೃತೂರಿನಿಂದ ಮಂಡ್ಯಕ್ಕೆ ಹೋಗುವ ರಸ್ತೆಯಲ್ಲಿರುವ (೧) ಅಮೃತೂರು (೨) ಹೊಸಕೆರೆ (೩) ಜಿನ್ನಾಗರ (೪) ಸಣಬ (೫) ಕೊಪ್ಪ (೬) ಹಂಚೀಪುರ (೭) ಯಣವಣ್ಣೆ ಗ್ರಾಮಗಳಿಗೆ ಈ ರಸ್ತೆಯಲ್ಲಿ ಓಡಾಡುವ ಬಸ್ಸುಗಳ ಧೂಳಿನಿಂದ ತೊಂದರೆಯಾಗುತ್ತಿರುವುದು ಸರಕಾರದ ಗಮನಕ್ಕೆ ಬಂದಿರುವುದೇ ;

(ಆ) ಈ ರಸ್ತೆಯನ್ನು ಅಭಿವೃದ್ಧಿಪಡಿಸಿ ಸರಕಾರ ತಕ್ಷಣ ರಸ್ತೆಗೆ ತಾರನ್ನು ಹಾಕಲು ಕ್ರಮ ಕೈಗೊಳ್ಳುತ್ತಾರೆಯೇ ?

ಶ್ರೀ ಎಸ್. ಬಂಗಾರಪ್ಪ (ಲೋಕೋಪಯೋಗಿ ಮಂತ್ರಿಗಳು).—

ಉತ್ತರ—(ಅ) ಸರ್ಕಾರದ ಗಮನಕ್ಕೆ ಬಂದಿದೆ.

(ಆ) ಈ ರಸ್ತೆಗೆ ಅಭಿವೃದ್ಧಿಪಡಿಸುವ ಮತ್ತು ಟಾರು ಹಾಕುವ ಕಾರ್ಯಕ್ರಮಗಳನ್ನು ಹಂತ ಹಂತವಾಗಿ ಹಣ ಒದಗಿದ ಹಾಗೆ ತೆಗೆದುಕೊಳ್ಳಲಾಗುವುದು.

ತುಮಕೂರು ಜಿಲ್ಲೆಯ ಕುಣಿಗಲ್ ತಾಲ್ಲೂಕು, ಅರಮನೆ ಹೊನ್ನಮಾಚನಹಳ್ಳಿಯ ಹೊಸಕೆರೆ ಕಟ್ಟುವುದು

೧೨. ಶ್ರೀ ಡಿ. ಟಿ. ಮಾಯಣ್ಣ (ಹುಲಿಯೂರುದುರ್ಗ).— ಮುಖ್ಯ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ.—

(ಅ) ತುಮಕೂರು ಜಿಲ್ಲೆಯ ಕುಣಿಗಲ್ ತಾಲ್ಲೂಕು, ಅರಮನೆ ಹೊನ್ನಮಾಚನಹಳ್ಳಿಯ ಹೊಸಕೆರೆಯನ್ನು ಕಟ್ಟಲು ಪ್ರಾರಂಭಿಸಿ ಎಷ್ಟು ವರ್ಷಗಳಾದುವು ;

(ಆ) ಸರಕಾರ ಕೂಡಲೇ ಈ ಕೆರೆಯನ್ನು ಕಟ್ಟಿ ಪೂರೈಸುವುದೇ ?